# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

## SPL.C.SC/ST No.23/2024

ಇಂದು ದಿನಾಂಕ**- 30.06.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಹನುಮೇಶ |
| ಗಂಡನ ಹೆಸರು- | ಅಡವೆಪ್ಪ |
| ವಯಸ್ಸು- | 45 ವರ್ಷ |
| ಉದ್ಯೋಗ- | ಒಕ್ಕಲುತನ |
| ವಾಸಸ್ಥಳ- | ಉಂಬಳಿ ಕಾಟಾಪುರ, ಕನಕಗಿರಿ ತಾಲೂಕು |

**ಮುಖ್ಯ ವಿಚಾರಣೆ - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ-1 ರವರು ನನ್ನ ಹೆಂಡತಿ. ಚಾಸಾ-6 ರವರು ನನ್ನ ತಾಯಿ. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ನನ್ನ ತಾಯಿಯ ತಮ್ಮ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ನನ್ನ ತಾಯಿಯ ತಮ್ಮನ ಹೆಂಡತಿ. ನ್ಯಾಯಾಲಯದ ಮುಂದಿರುವ 3 ನೇ ಆರೋಪಿಯು 1 ಮತ್ತು 2 ನೇ ಆರೋಪಿತರ ಮಗ. ಸುಮಾರು 50 ವರ್ಷಗಳ ಹಿಂದೆ ನನ್ನ ತಾಯಿಯ ಮದುವೆ ವಾಲ್ಮೀಕಿ ಜನಾಂಗದ ನನ್ನ ತಂದೆಯ ಜೊತೆ ಆಗಿತ್ತು. ಲಚಮವ್ವ ಎನ್ನುವವರು ನನ್ನ ತಾಯಿಯ ತಾಯಿ. ನನ್ನ ತಾಯಿಗೆ ಅವರ ತಾಯಿಯು 5 ಎಕರೆ 25 ಗುಂಟೆ ಹೊಲವನ್ನು ದಾನಪತ್ರದ ಮೂಲಕ

ಕೊಟ್ಟಿದ್ದರು. ನನ್ನ ತಾಯಿಯು ನನ್ನ ತಂದೆಯನ್ನು ಮದುವೆಯಾಗಿದ್ದು 1 ನೇ ಆರೋಪಿಗೆ ಇಷ್ಟವಿರಲಿಲ್ಲ. ಆದ್ದರಿಂದ 1 ನೇ ಆರೋಪಿ ನನ್ನ ತಾಯಿಯನ್ನು ರಿಜಿಸ್ಟರ್ ಅವರ ಕಚೇರಿಗೆ ಕರೆದುಕೊಂಡು ಹೋಗಿ ತನ್ನ ಹೆಸರಿಗೆ ಹೊಲದ ದಾನಪತ್ರವನ್ನು ಮಾಡಿಸಿಕೊಂಡರು. ಆ ವಿಚಾರ ನಮಗೆ ಗೊತ್ತಿರಲಿಲ್ಲ. ನಮಗೆ ಗೊತ್ತಾದ ನಂತರ 1 ನೇ ಆರೋಪಿಯ ಬಳಿ ಪ್ರಶ್ನಿಸಿದಾಗ ಅದು ನನ್ನ ತಾಯಿಯ ಹೊಲ, ನಾನು ಮಾಡಿಸಿಕೊಂಡಿದ್ದೇನೆಂದು ಹೇಳಿದರು. ನಂತರ ನಾವು ಗಂಗಾವತಿ ನ್ಯಾಯಾಲಯದಲ್ಲಿ ಕೇಸು ಹಾಕಿದೆವು. ಅಂದಿನಿಂದ ನಮ್ಮ ಹಾಗೂ 1 ನೇ ಆರೋಪಿಯ ಸಂಬಂಧ ಸರಿ ಇರಲಿಲ್ಲ. ನಾನು, ಚಾಸಾ-1 ಮತ್ತು 6 ರವರು ಜೊತೆಯಾಗಿ ಉಂಬಳಿ ಕಾಟಾಪುರದಲ್ಲಿ ಹೊಲದ ಜಮೀನಿನಲ್ಲಿ ವಾಸವಿದ್ದೇನೆ. ಸುಮಾರು 9 ವರ್ಷಗಳ ಹಿಂದೆ ಒಂದು ದಿನ ಚಾಸಾ-1 ರವರು ಮುರಳಿಧರ ಅವರ ಹೊಲಕ್ಕೆ ಕೆಲಸಕ್ಕೆ ಹೋಗಿದ್ದರು. ಆ ದಿನ ಸಂಜೆ ಸುಮಾರ 05.00 ಗಂಟೆಗೆ ಕೆಲಸ ಮುಗಿಸಿ ಮನೆಗೆ ಆಕೆ ವಾಪಸ್ಸು ಬರುತ್ತಿದ್ದಾಗ ಚಾಸಾ-8 ಮತ್ತು ನಮ್ಮ ಹೊಲದ ಮಧ್ಯ ಇರುವ ಬದುವಿನಲ್ಲಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯು ನಾಯಕ ಸೂಳೆ ನಿನ್ನ ಗಂಡನಿಗೆ ಹೋಗಿ ಹೇಳು ಗಂಗಾವತಿ ಸಿವಿಲ್ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆ, ಅದನ್ನು ವಾಪಸ್ಸು ತೆಗೆದುಕೊಳ್ಳಲು ಹೇಳು, ಇಲ್ಲದಿದ್ದರೆ ಬಂದೂಕಿನಿಂದ ಸುಟ್ಟು ಸಾಯಿಸುತ್ತೇನೆ ಎಂದು ಬಾಯಿಗೆ ಬಂದಂತೆ ಬೈದರು, ಆರೋಪಿತರು ಎಲ್ಲರೂ ಸೇರಿ ಆಕೆಗೆ ಬಡಿದರು ಎಂದು ಚಾಸಾ-1 ರವರು ನನಗೆ ಹೇಳಿದರು. ಆಕೆಗೆ ಬಹಳ ಏಟಾಗಿತ್ತು. ಊರವರನ್ನು ಕರೆಯಿಸಿ ವಿಚಾರ ಮಾಡೋಣ

ಎಂದು 2 ದಿನ ಕಾದೆವು. ಆರೋಪಿತರು ಬಾರದ ಕಾರಣ ನಾವು ಪೊಲೀಸ್ ಠಾಣೆಗೆ ಹೋದೆವು. ಚಾಸಾ-1 ರವರು ದೂರು ನೀಡಿದರು. ಅದನ್ನು ಚಾಸಾ-1 ರವರು ಹೇಳಿದಂತೆ ನಾನು ಬರೆದೆನು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದರು. ನಿ.ಪಿ.-1 ರಲ್ಲಿರುವ ನನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.-1-ಎ ಎಂದು ಗುರುತಿಸಿದ್ದೇನೆ.

**ಪಾಟೀಸವಾಲು - ಆರೋಪಿತರ ಪರ ವಕೀಲರಿಂದ** -

2. ಆರೋಪಿತರ ಪರ ವಕೀಲರು ಕಾಲಾವಕಾಶ ಕೇಳಿದ್ದು ಸಕಾರಣ ಇರುವುದಿಲ್ಲ. ಆದ್ದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಯಿತು.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಆಸೀನ).